Sanction of Electric Pumps for wells in Gundlupet Taluk.

*Q.—138. Smt. K. S. NAGARATHNAMMA (Gundlupet).—

Will the Government be pleased to state:—

(*a*) the number of ryots in Gundlupet Taluk to whom electic pumps for wells have been sanctioned during the last three years;

(*b*) the number of electric pumps sanctioned per year;

(*c*) the number of persons that are stil not provided with power after purchasing the electric pumps and the hoblis to which they belong;

(*d*) out of them, the number of persons to whom notices regarding payment of instalments have been issued?

*A.—Sri ALUR HANUMANTHAPPA (Deputy Minister for Minor Irrigation) [on behalf of SRI S. NIJALINGAPPA (Chief Minister)].—

(*a*) Nil.

(*b*) Nil.

(*c*) Does not arise in view of answers to clauses (*a*) and (*b*).

(*d*) Does not arise in view of the answer to clause (*a*).

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೂರು ವರ್ಷಗಳಿಂದ ಎಷ್ಟು ಅರ್ಜಿಗಳು ಬಂದಿವೆ ?

†ಶ್ರೀ ಆಲೂರು ಹನುಮಂತಪ್ಪ.—ವಿದ್ಯುಚ್ಛಕ್ತಿಗಾಗಿ ಬಂದಿರುವ ಅರ್ಜಿಗಳ ವಿವರಗಳನ್ನು ಬೇಕಾದರೆ ಕೊಡುತ್ತೇನೆ, ಪಂಪುಗಳು ಮೂರು ವರ್ಷಗಳಿಂದ ಮಂಜೂರಾಗಿರುವುದಿಲ್ಲ; 1963-64 ಕ್ಕೆ ಮಾತ್ರ ಬೇಕಾದರೆ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅರ್ಜಿಗಳು ಎಷ್ಟು ಬಂದಿದ್ದವು ?

ಶ್ರೀ ಆಲೂರು ಹನುಮಂತಪ್ಪ.—1960-61 ರಲ್ಲಿ 18 ಅರ್ಜಿಗಳು ಬಂದಿದ್ದು 16 ಮಂಜೂರಾಗಿ ಸರ್ವಿಸ್ ಕೊಟ್ಟಿರುವುದು 8. 1961-62 ರಲ್ಲಿ ಬಂದುದು 12 ಅರ್ಜಿ, 14 ಮಂಜೂರಾಗಿ (ಹಿಂದಿನದೂ ಸೇರಿ), 15 ಸರ್ವಿಸ್ ಆಗಿವೆ. 1962-63 ರಲ್ಲಿ ಬಂದ 24 ಅರ್ಜಿಗಳಲ್ಲಿ 12 ಮಂಜೂರಾಗಿ 15 ಕ್ಕೆ ಸರ್ವಿಸ್ ಕೊಟ್ಟಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕೇಳುವ ಪ್ರಶ್ನೆ ಕಳೆದ ಮೂರು ವರ್ಷಗಳಿಂದ ಎಷ್ಟು ಅರ್ಜಿಗಳು ಬಂದಿವೆ ಎಂದು.

Sri ALUR HANUMANTHAPPA.—Applications for power for pumpsets have been received in the year 1960-61, 1961-62 and 1962-63. That information I can furnish to the House and to the Honourable Member.

Applications received in 1960-61	...	18
,, ,, 1961-62	...	12
,, ,, 1962-63	...	24
,, ,, Total	..	54
Applications sanctioned for power in 1960-61		14.
,, ,, ,, 1961-62	...	12.
,, ,, ,, ,, 1962-63	...	24.

Pumpsets serviced in the three years respectively ... 8, 15 and 15; 38 in all.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದೂ ಇಲ್ಲ ಎಂದು ಹೇಳಿ ಈಗ 38 ಎಂದು ಹೇಳಿದರೆ ಇದರ ಅರ್ಥವೇನು ?

ಶ್ರೀ ಆಲೂರು ಹನುಮಂತಪ್ಪ.—ಎಷ್ಟು ಪಂಪ್ ಸೆಟ್‌ಗಳು ಮಂಜೂರಾಗಿವೆ ಎಂದು ಕೇಳಿರುವ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದೇನೆ, ಆ ವರ್ಷಗಳಲ್ಲಿ ಮಂಜೂರು ಮಾಡಿಲ್ಲ. 1963-64 ನೆಯ ಸಾಲಿಗೆ ಸಂಬಂಧಪಟ್ಟಂತೆ ಬೇಕಾದರೆ ವಿವರಗಳನ್ನು ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉತ್ತರ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ.

Sri ALUR HANUMANTHAPPA.—I will clarify it. Pumpsets sanctioned for the last three years—1960-61,1961-62 and 1962-63...Nil. Because no pumpsets have been sanctioned for this Taluk; but applications were pending for power. That was the information I have furnished just now.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೋದ ವರ್ಷ ಹೈರ್ ಪರ್ಚೇಸ್ ಮೂಲಕವೆ ಅಥವಾ ಯಾವ ಮೂಲಕ ಕೊಟ್ಟಿದ್ದೀರಿ ಎಂದು ನಾನು ಕೇಳಿಲ್ಲ; ನಮ್ಮ ತಾಲ್ಲೂಕಿಗೆ ಅನುಕೂಲವಾಗಲು ಎಷ್ಟು ಕೊಟ್ಟಿದ್ದೀರಿ, ಮೂರು ವರ್ಷಗಳಿಂದ ಎಷ್ಟೆಷ್ಟು ಅರ್ಜಿಗಳು ಬಂದಿದ್ದುವು, ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬುದು ನನ್ನ ಪ್ರಶ್ನೆ.

ಶ್ರೀ ಆಲೂರು ಹನುಮಂತಪ್ಪ.—ಒಟ್ಟು 60 ಅರ್ಜಿಗಳು ಬಂದಿರುವುದರಲ್ಲಿ, 23 ಪರಿಶೀಲನೆಯಾಗಿವೆ,10 ಸಂದರ್ಭಗಳಲ್ಲೂ ಪಂಪ್ ಸೆಟ್‌ಗಳನ್ನು ಕೊಡಲಾಗಿದೆ,13 ತೀರ್ಮಾನವಾಗಿಲ್ಲ,ಪರಿಶೀಲನೆಯಲ್ಲಿವೆ. ಹೆಂಡಿಂಗ್ ಇರುವ ಅರ್ಜಿಗಳ ಬಗ್ಗೆ ಹೇಳುವುದಾದರೆ ಪಂಪ್ ಸೆಟ್‌ಗಳು ದಾಸ್ತಾನಿನಲ್ಲಿಲ್ಲದ ಕಾರಣ, ಆದಷ್ಟು ಬೇಗ ಅವುಗಳನ್ನು ಕೊಡಲಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪಂಪ್ ಸೆಟ್‌ಗಳಿಲ್ಲವೆಂದು ಹೇಳುತ್ತಾರೆ, ಹಾಗಾದರೆ ಗುಂಡಲುಪೇಟೆ ತಾಲ್ಲೂಕನ್ನು ಬಿಟ್ಟು ಬಾಕಿ ತಾಲ್ಲೂಕುಗಳಿಗೆ ಕೊಟ್ಟಿಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಆ ತಾಲ್ಲೂಕನ್ನು ಬಿಟ್ಟಿಲ್ಲ, ಸಾಧ್ಯವಾದಷ್ಟು ಅಲ್ಲಿಗೂ ಕೊಡಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ತಾಲ್ಲೂಕಿನಿಂದ ಬಂದ 60 ಅರ್ಜಿಗಳ ಪೈಕಿ ಕೇವಲ 10 ಕ್ಕೆ ಮಾತ್ರ ಮಂಜೂರು ಮಾಡಿದ್ದಾರೆ, ಕಾರಣವೇನು ? ಆ ಪ್ರದೇಶವನ್ನು ಅಭಾವ ಪ್ರದೇಶ ಎಂದು ಹೇಳುತ್ತಾರೆ, ಇದು ಅನ್ಯಾಯವಲ್ಲವೇ ?

Sri ALUR HANUMANTHAPPA.—Prior to 63-64, 60 applications had been received, out of which 23 applications have been considered and 10 pumpsets have already been issued. With regard to the 10 applications, pumpsets are out of stock and they are going to be issued urgently.

ಶ್ರೀಮತಿ ಬನವರಾಜೇಶ್ವರಿ.—ಕೋಲಾರ ಜಿಲ್ಲೆಗೆ ಐದಾರು ಸಾವಿರ ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ, ಬಾಕಿ ತಾಲ್ಲೂಕುಗಳಿಗೆ ಮಾತ್ರ ಬಹಳ ಕಡಿಮೆ.

[*No reply*]

ಶ್ರೀ ಜಿ. ವಿ. ಗೌಡ.—ಪಂಪ್‌ಸೆಟ್‌ಗಳನ್ನು ಒದಗಿಸುವ ಕೆಲಸ ಸುಗಮವಾಗಿ, ಸಮರ್ಪಕವಾಗಿ ನಡೆಯುತ್ತಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—1962-63 ರಿಂದೀಚೆಗೆ ಸರ್ಕಾರ ಈ ವಿಚಾರದಲ್ಲಿ ಒಂದು ನಿರ್ದಿಷ್ಟ ಗುರಿಯನ್ನು ಹಾಕಿಕೊಂಡು ಹತ್ತಾರು ಸಾವಿರ ಪಂಪ್ ಸೆಟ್ಟುಗಳನ್ನೊದಗಿಸಬೇಕೆಂದು ಮಾಡಿ, ಅದರಂತೆ 22 ಕಂಪನಿಗಳಿಗೆ ವಿದ್ಯುಚ್ಛಕ್ತಿ ಬೋರ್ಡಿನವರು ಈಗಾಗಲೇ ಆರ್ಡರ್ ಕೊಟ್ಟಿದ್ದಾರೆ. ರೈತರು ಯಾವ ಪಂಪು ಕೇಳುತ್ತಾರೋ ಅದನ್ನು ಕೊಡಬೇಕೆಂದು ಮಾಡಲಾಗಿದೆ. ಹೀಗಿರುವುದರಿಂದ ಪಂಪ್ ಸೆಟ್ ಸರಬರಾಜು ಮಾಡುವುದರಲ್ಲಿ ಸ್ವಲ್ಪ ಕಷ್ಟವಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ತಾಲ್ಲೂಕಿಗೆ ಹೆಚ್ಚು ಇನ್ನೊಂದಕ್ಕೆ ಕಡಮೆ ಕೊಡುವುದೇಕೆ ? ಗುಂಡಲುಪೇಟೆ ತಾಲ್ಲೂಕಿಗೆ ಕಡಮೆ ಕೊಡುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಒಂದು ತಾಲ್ಲೂಕಿಗೆ ಕಡಮೆ, ಇನ್ನೊಂದು ಕಡೆಗೆ ಹೆಚ್ಚು ಕೊಡಬೇಕೆಂಬ ಉದ್ದೇಶವೇನೂ ಇಲ್ಲ. ಎಲ್ಲಿ ವಿದ್ಯುಚ್ಛಕ್ತಿ ಇದೆಯೋ ಅಲ್ಲಿ ಜಾಸ್ತಿ ಕೊಡುತ್ತಿದ್ದಾರೆ, ಎಲ್ಲಿ ಡೀಸೆಲ್ ಪಂಪು ಬೇಕೋ ಅಲ್ಲಿ ಅದನ್ನು ಕೊಡುತ್ತಿದ್ದಾರೆ. ಎಲ್ಲ ತಾಲ್ಲೂಕುಗಳ ಹಿತದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು ಕೊಡಬೇಕೆಂದು ಹೇಳಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ವಿಸ್ ಮಾಡುವುದರಲ್ಲಿ, ರೀವೈಂಡ್ ಮಾಡಿರುವ ಟ್ರಾನ್ಸ್‌ಫಾರ್ಮರುಗಳನ್ನು ಹಾಕಿ ಅವು ಮೂರು ದಿವಸಕ್ಕೆ ಸುಟ್ಟು ಹೋಗಿರುವ ನಮ್ಮ ತಾಲ್ಲೂಕಿನಲ್ಲಿ ಪಂಪುಗಳು ಕೆಲಸ ಮಾಡದೇಯಿರುವುದು ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಗೊತ್ತಿಲ್ಲ, ತಿಳಿದುಕೊಂಡು ಹೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—ಸರ್ಕಾರ ಗೊತ್ತು ಮಾಡಿರುವ ಪಂಪುಗಳನ್ನು ತೆಗೆದುಕೊಳ್ಳಬೇಕೇ ಹೊರತು ರೈತರು ಕೇಳುವುದನ್ನು ಕೊಡುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹಾಗಿಲ್ಲ, ರೈತರು ಬೇಕೆಂದು ಕೇಳುವುದನ್ನೇ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Acquisition of Lands for Extension of Harijan Colonies in Bagepalli, Gudibanda and Gauribidanur Taluks.

*Q.—1. Sri B. SUBBARAYAPPA (Bagepalli).—

Will the Government be pleased to state :—

(*a*) the number of applications received for acquisition of lands for extension of Harijan Colonies in Bagepalli, Gudibanda and Gauribidanur Taluks, Kolar District ;

(*b*) out of them, the number of cases disposed of and the number of cases still pending ?

A.—Sri M. V. KRISHNAPPA (Minister for Revenue).—

(*a*) 26 (from 1-1-1961).

(*b*) 14 cases are finalised.

12 cases are pending.

Attack of Diseases to important crops like Jola, Ragi, Cotton, etc. in the State.

*Q.—41. Sri KUNDUR RUDRAPPA(Channagiri).—

Will the Government be pleased to state.—

(*a*) whether they are aware that important crops like Jola, Ragi, Cotton, Groundnut, Chillies, Banana and Areca have been subject to the attack of diseases in the State ;

(*b*) the precautionary measures taken by the Agriculture and N.E.S. Departments to prevent such diseases ?

A.—Sri H. C. BORAIAH (Parliamentary Secretary to Minister for Agriculture).—

(*a*) Yes.

(*b*) The Agricultural Department through the plant protection staff, forewarns, educates and assists the cultivators in undertaking preventive measures against crop pests and diseases. Forewarning is